ಕೂದಲನೇ ನಿಗಿರಿಸುತ್ತಿದ್ದಳು. ಕಳವು ಮಾಡಿದವಳಂತೆ ಅವುರಾಳಗ ಕಾಲು ಕಿತ್ತಿಡಾಕತ್ತಿದ್ದಳು.

ದವಾಖಾನಿಗೆ ಹೊಡೆದಿದ್ದ ಸರಕಾರಿ ಬಣ್ಣದ ಕಾಂತಿ ಕಳೆದು ಮಾಸಿಟ್ಟಿತು. ಅಂಗಳದಾಗ ಖಾಲಿಯಾದ ಗ್ಲೂಕೋಸ್ ಬಾಟಲಿ ಸೈತ ಪೈಪ್ಗಳು, ಬ್ಯಾಗಡಿಗಳು ಅಲ್ಲಲ್ಲಿ ನೆಲ ಹಿಡಿದಿದ್ವು. ಒಳ ಹೋದ ಗೌರವ್ವ ಅಷ್ಟು ಮುಂಜಾನೆ ಕೂಡ ಒಂದ್ಯಾಡು ಮುದುಕಿಯರು, ಕೊಂಕಳದಾಗ ಕೂಸು ಎತ್ತಿಕೊಂಡವರು, ಬಸರು ಇದ್ದವರು ಕುಂತಿದ್ದು ನೋಡಿದಳು. ಡಾಕ್ಟರಾಗಲಿ, ನರ್ಸಾಗಳಾಗಲಿ, ಕಂಪೌಂಡ್ರ ಸುಳಿವು ಕಾಣಂಗ ಕಾಣಲಿಲ್ಲ. ಸುತ್ತ ನೋಡಿ ಬಿಳಿ ಟೇಬಲ್ಲಿಗೆ ಕುಂಡಿ ಹಚ್ಚಿದರು. ಜೀಡಿಟ್ಟ ಗೋಡೆಗೆ ತೂಗುತಿದ್ದ ಏಡ್ಸ್ ತಡೆಗಟ್ಟುವ ಸಲುವಾಗಿ ಎಚ್ಚರಿಕಿಗೆ ಹಾಕಿದ ಸಂಭೋಗದ ಚಿತ್ರಗಳು, ಬ್ರೆಸ್ಟ್ ಕ್ಯಾನ್ಸರ್ ಎಚ್ಚರಿಕೆ ತೋರಿಸದಕ ಹಾಕಿದ ತುಂಬಿದ ಮಲಿ ಚಿತ್ರಗಳು, ಯೋನಿ ಆಕಾರದಂತೆ ಕಾಣುತ್ತಿರುವ ಗೆರಿಗಳು, ಜೋತು ಬಿದ್ದ ಶಿಶ್ನದ ಚಿತ್ರಗಳು, ಪಾರಿಗೆ ಪೂರ ಗಮನಸೆಳೆದು ಮುಜುಗರಕ್ಕೀಡು ಮಾಡಿದವು. ಎಲ್ಲವನ್ನು ನೋಡಿಕೇಸಿ ಮಾರಿ ಕೆಳಗಾಕಿದಳು. ಹೊತ್ತು ಮ್ಯಾಕ ಹೋಗುತ್ತಿತ್ತು. ಬಿಳಿ ಪ್ಯಾಂಟ್ ಬಿಳಿ ಅಂಗಿ ಉಟ್ಟು ಬರಾಕತ್ತಿದ್ದವನ್ನು ನೋಡಿ ಗೌರವ್ವ 'ಯಪ್ಪಾ... ಯಪ್ಪಾ...' ಎಂದು ಎದ್ದಾಕಿಗೆ 'ಕುಂತಗರೆಮ್ಮಾ ಕುಂತಗರಿ, ಡಾಕ್ಟರು ಬರೋದು ಇನ್ನೂ ದೂರಾದ'ಎಂದವನು ಕಂಪೌಂಡ್ರ್ ಎಂಬುದು ತಿಳಿಯಲಿಲ್ಲ. ಟೇಬಲ್ಲು, ಕುರ್ಚಿ ಹೊರಿಸಿ ಕಸ ಬಳಿದಾಗ ನೋಡಿ ಬಾಯಿಗೆ ಸೆರಗಿಡಿದುಕೊಂಡು ತಲಿಯಾಡಿಸಿ 'ಹ್ಞೂ'ಗುಟ್ಟಿ ಕುಂತರು.



ಕಡಿಗೆ ಡಾಕ್ಟರ್ ಬಂದು ವಿಚಾರಿಸುತ್ತಿದ್ದಾಗ ತಲಿ ತುಂಬಾ ಸೆರಗಾಕಿಕೊಂಡು ಮಾರಿ ಮುಂದ ಹಿಡಕೊಂಡಿದ್ದ ಸೆರಗಿನ ತುದಿಯನ್ನು ಬಿಟ್ಟು ಕುರ್ಚಿ ಮ್ಯಾಗ ಕಂಡ ಡಾಕ್ಟರನನ್ನು ನೋಡಿ ಗೌರವ್ವ ಕೈ ಮುಗಿದಳು. ಒಳ ಕರೆದುಕೊಂಡು ಟೇಬಲಿಗೆ ಕುಂದ್ರಿಸಿಕೊಂಡ ಡಾಕ್ಟರು 'ಏನಮ್ಮ ಏನಾಗ್ಯದಾ?' ಕೇಳಿದ ಡಾಕ್ಟರನ ಮಾತಿಗೆ ಗೌರವ್ವ ಕಥಿಮಾಡಿ ಮಗಳ ಸಂಕ್ಟನ ಕಣ್ಣೀರು ಸುರಿಸಿಕೆಂತ ಹೇಳಿ 'ಇದನ್ನ ಹೆಂಗಾರ ಮಾಡಿ ನೀವೇ ಬಗೆ ಹರಸಬೇಕಪ್ಪ ನಮ್ಮಪ್ಪ. ಇದರ ಕಾಲಾಗ ಜೀವ ಹೈರಾಣ ಆಗ್ಯಾದ' ಎಂದು ಕಾಲಿಡಕೊಳ್ಳಾಕ ಬಂದ ಗೌರವ್ವನನ್ನು ಸಮಾಧಾನಿಸಿದ. ಎದ್ರಿಗಿ ಕೈಯಾಗ ಚೀಲ ಹಿಡಕೊಂಡು ಕಡಾವು ನಿಂತಿದ್ದ ಪಾರಿಯನ್ನು ಕಂಡ ಡಾಕ್ಟರ ಮರಿಲಿಂಗಪ್ಪ ಒಮ್ಮಿ ಆಕೆಯ ದೇಹವನ್ನ ಮ್ಯಾಲಿಂದ ನೋಡಿದ. 'ಚಂದನ ಪೋರಿಗೆ ಮಂದಿ ಹಂಗ್ಸದಕ್ಕ ಚಿಂತಿ ಮಾಡಿ ದಿನಕೀಟು ಒಳಗೆ ಹೊಂಟಾಳೆಪ್ಪಾ' ಎಂದು ಗೌರವ್ವ ಸಂಕಟ ಹೊರಗಾಕಿದಳು.

'ಅಂತದ್ದೇನ್ ದೊಡ್ಡ ಸಮಸ್ಯ ಅಲ್ಲ ಬುಡಗೆ ಯವ್ವಾ' ಎಂದು ಡಾಕ್ಟರು ಪಾರಿಯನ್ನು ಅಂಗಾತ ಮಕ್ಕಿಸಿ ಮೈಕೈ ಮುಟ್ಟಿ ಪರೀಕ್ಷೆ ಮಾಡಿ 'ಏನಿಲ್ಲವ್ವಾ ಎಲ್ಲಾ ಬೇಸ್ ಅದಾಳ ದೇಹದಾಗ ಹಾರ್ಮೋನ್ಸ್ ಸಲ್ಪ ವ್ಯತ್ಯಾಸ ಆದ್ರ ಇಂತಹ ಸಮಸ್ಯೆ ಬರ್ತಾವ. ಇದನ್ನೇ ಬುಗುಲು ಎನಿಸಿಕೊಂಡು ಬುಡ್ತೀರಿ' ಎಂದಾಗ 'ಏನಾರ ಮಾಡಪ್ಪ ನಮಪ್ಪ, ಈ ಸಂಕ್ಟದಿಂದ ಪಾರು ಮಾಡು' ಎಂದು ತಾಳ್ಮೆ ಕಳೆದುಕೊಂಡ ಗೌರವ್ವನಿಗೆ, 'ನೋಡೆವ್ವಾ ಜಲ್ದಿ ಅರಾಮು ಮಾಡು ಅನ್ನಕ ಮೂಗಿಗೆ ನೆಗಡಿ, ಹೊಟ್ಯಾಗ ಊರಿ ಬಂದಿಲ್ಲ ಅಕಿಗಿ. ತಾಳ್ಮೆ ಕಳಕಳ್ಳಾರದೆ ಹೇಳಿದಂಗ ನಡಿರಿ. ಈ ಪ್ರಕೃತಿ ಜೊತೆ ಅವುಕೂಡ ಅರಳಬೇಕಾಗ್ಯಾವ. ಎಲ್ಲ ಅಂಗಗಳು ಬೆಳೆದಂಗ ಅವು ಕೂಡ ಬೆಳಿಬೇಕು ಅವೇ ಜೀವಗಳಿಗೆ ಜೀವ ಕೊಡುವಂತಾವು. ನೀವೇನ್ ಚಿಂತಿ ಮಾಡ ಅಗತ್ಯ ಇಲ್ಲ. ನಾನೇಳಿದ ರೀತಿ ಮಾಡಿ' ಎಂದು ಯಾಡ್ ಟಾಣಿಕಿ ಬಾಟಲಿ ಒಂದ್ಯಾಡ್ ನಮೂನೆ ಗುಳಿಗಿ ನೀಡಿದ.

ಸಮಾಧಾನ ಆಗದೆ ಪಾರಿ ಮಾರಿ ಸಣ್ಣದು ಮಾಡಿದ್ದು ನೋಡಿ 'ನಾನಿದೀನಿ' ಎನ್ನುವಂತೆ ಕಣ್ಣು ಮುಚ್ಚಿ ಆತ್ಮವಿಶ್ವಾಸ ತುಂಬಿದ. ಪಾರಿ ಬದುಕಿಗೆ ಭರವಸೆ ನೀಡಿ ತಲ್ಯಾಗಿನ ಚಿಂತಿ ಹೋಗುವಂಗ ಔಷಧೀಯ ಮಾತುಗಳನ್ನಾಡಿ ತಾಯಿ- ಮಗಳಲ್ಲಿ ಧೈರ್ಯ ತುಂಬಿದ ಡಾಕ್ಟರಿನ ಮಾತು ಕೇಳಿ ಎದ್ಯಾಗಿನ ಬಾರ ಹೊಟ್ಟೆನ ಸಂಕ್ಟ ಇಳಿದಂಗ ಎನಿಸಿತು. ವಾರಿಗಿ ಗೆಳೆತಿಯರ ಮುಂದ ಎದಿಯುಬ್ಬಿಸಿ ತಿರಗಬೇಕು ನಾಕು ಮಂದ್ಯಾಗ ಇದ್ದು ಚಂದ ಗಂಡನ ಮನಿ ಸೇರಬೇಕೆಂದು ವಿಶ್ವಾಸ ತುಂಬಿಕೊಂಡು ಪಾರಿ ತಾಯಿ ಜತೆ ಕಳೆಗುಂದದೇ ಊರ ಕಡೆ ಹೆಜ್ಜಿ ಇಟ್ಟಳು.

●